## ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ, ಶ್ರೀ ಡಿ ಎಸ್ ಅರುಣ್, ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಕ್ಯಾಸನೂರು ಫಾರೆಸ್ಟ್ ಡಿಸೀಸ್ (KFD) ಯಿಂದ ಮೃತಪಟ್ಟ ಸಂತ್ರಸ್ತರ ಕುಟುಂಬಗಳಿಗೆ ಸರಕಾರ ನಯಾ ಪೈಸೆ ಪರಿಹಾರ ನೀಡದಿರುವುದರಿಂದ ಸಂತ್ರಸ್ತರ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿರುವ ಬಗ್ಗೆ, ದಿನಾಂಕ 12-02-2024 ರ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ವರದಿ ಪ್ರಕಟವಾಗಿರುತ್ತದೆ.

ಕ್ಯಾಸನೂರು ಫಾರೆಸ್ಟ್ ಡಿಸೀಸ್ (KFD) ಬಗ್ಗೆ ಈ ಹಿಂದಿನ ಅಧಿವೇಶನಗಳಲ್ಲಿಯೂ ನಾನು ಸಾಕಷ್ಟುಬಾರಿ ಸರ್ಕಾರದ ಗಮನಕ್ಕೆ ತಂದಿರುತ್ತೇನೆ. ಶಿವಮೊಗ್ಗ ಜಿಲ್ಲೆಯೊಂದರಲ್ಲೆ 2019ರಲ್ಲಿ KFDಗೆ 12 ಜನ ಮೃತಪಟ್ಟಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರ ಮುಖ್ಯಮಂತ್ರಿ ನಿಧಿಯಿಂದ ಪರಿಹಾರ ನೀಡಿತ್ತು. ಆದರೆ ಈ ಸಲ ಸರ್ಕಾರ ಯಾವುದೇ ಪರಿಹಾರವನ್ನು ನೀಡದಿರುವುದು ಬೇಸರವನ್ನುಂಟು ಮಾಡಿರುತ್ತದೆ. ಅದರ ಜೊತೆಗೆ ಈ ಸಲ ಇದ್ದ ಲಸಿಕೆಯನ್ನೂ ಸಹ ವಾಪಸ್ ಪಡೆದಿರುತ್ತದೆ. ಇದರಿಂದ ಪಶ್ಚಿಮ ಘಟ್ಟದ ವ್ಯಾಪ್ತಿಯಲ್ಲಿ ವಾಸವಾಗಿರುವವರು ಅನಿವಾರ್ಯವಾಗಿ ಅಡ್ಡ ಪರಿಣಾಮಗಳನ್ನು ಎದುರಿಸುವಂತಾಗಿದೆ. ಅಕ್ಟೋಬರ್‌ನಲ್ಲೆ ಜಾಗೃತಗೊಳ್ಳಬೇಕಾದ ಇಲಾಖೆ ಸೋಂಕು ಉಲ್ಬಣಗೊಳ್ಳುವ ವೇಳೆಗೆ ಎಚ್ಚರಗೊಂಡಿರುವುದು ದುರಾದೃಷ್ಟವೇ ಸರಿ.

ಕೋವಿಡ್‌ನಿಂದ ಮೃತಪಟ್ಟ ಕುಟುಂಬಗಳಿಗೆ ವ್ಯವಸ್ಥಿತ ಪರಿಹಾರ ನೀಡಿದ ಸರಕಾರಗಳು ಕಳೆದ 66 ವರ್ಷಗಳಿಂದ ರಾಜ್ಯದ 11 ಜಿಲ್ಲೆಗಳಲ್ಲಿ ಕಾಡುತ್ತಿರುವ ಈ ಕಾಯಿಲೆಗೆ ಸೂಕ್ತ ಚಿಕಿತ್ಸೆ, ಔಷಧ, ಲಸಿಕೆ ಅಥವಾ ಪರಿಹಾರ ಒದಗಿಸುವ ಬಗ್ಗೆ ಗಂಭೀರ ಚಿಂತನೆ ನಡೆಸಿರುವುದಿಲ್ಲ. ಅದರ ಜೊತೆಗೆ ಕೆಎಫ್‌ಡಿಯಿಂದ ಮೃತಪಟ್ಟರೆ ಖಾಸಗಿ ಆಸ್ಪತ್ರೆಗಳಲ್ಲಿ ಸಾವಿನ ಕಾರಣ ಕೆ ಎಫ್ ಡಿ ಎಂದು ನಮೂದಿಸುತ್ತಿಲ್ಲ. ಪ್ರಮಾಣ ಪತ್ರ ಎಲ್ಲಿ ಪಡೆಯಬೇಕೆಂಬ ಬಗ್ಗೆ ಜನರಿಗೆ ಮಾಹಿತಿಯೂ ಇಲ್ಲ.

ಕುಟುಂಬದ ಆಸ್ತಿ ಎನಿಸಿಕೊಂಡ ಯಜಮಾನರೇ ಈ ಕಾಯಿಲೆಗಳಿಂದ ಪ್ರಾಣ ಕಳೆದುಕೊಳ್ಳುತ್ತಿರುವುದರಿಂದ ಸಂತ್ರಸ್ತರು ಚಿಂತಾಕ್ರಾಂತರಾಗಿದ್ದಾರೆ. ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವರು ಕೆಎಫ್‌ಡಿಯಿಂದ ಮರಣ ಹೊಂದಿದವರಿಗೆ ಯಾವುದೇ ರೀತಿಯ ಸಹಾಯ ಅಥವಾ ಪರಿಹಾರ ಇರುವುದಿಲ್ಲವೆಂಬ ಬಗ್ಗೆ ಹೇಳಿಕೆ ನೀಡಿರುತ್ತಾರೆ.

ಆದ ಕಾರಣ, ಈ ವಿಚಾರವನ್ನು ಸರ್ಕಾರ ಸೂಕ್ಷ್ಮವಾಗಿ ಪರಿಗಣಿಸಿ, ಕೆಎಫ್‌ಡಿ ಕಾಯಿಲೆಯ ಸ್ವರೂಪ ಉಲ್ಬಣಗೊಳ್ಳುವ ಮುನ್ನ ಅಥವಾ ಮತ್ತಷ್ಟು ಪ್ರಾಣಹಾನಿಗಳು ಸಂಭವಿಸುವ ಮುನ್ನ ಸರ್ಕಾರ ಎಚ್ಚೆತ್ತುಕೊಂಡು ಕಾಯಿಲೆಗೆ ಅಗತ್ಯವಿರುವ ಲಸಿಕೆ, ಸೂಕ್ತ ಚಿಕಿತ್ಸೆಗೆ ವ್ಯವಸ್ಥೆ ಮಾಡುವುದರ ಜೊತೆಗೆ ಪ್ರಾಣ ಕಳೆದುಕೊಂಡಿರುವ ಸಂತ್ರಸ್ತ ಕುಟುಂಬಗಳಿಗೆ ಕೋವಿಡ್ ಸಂತ್ರಸ್ತರ ಮಾದರಿಯಲ್ಲಿ ಸೂಕ್ತ ಪರಿಹಾರವನ್ನು ಪ್ರಕಟಿಸುವ ಬಗ್ಗೆ:-

**ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಹೇಳಿಕೆ:-**

*****

ಮಂಗನ ಕಾಯಿಲೆ (Kyasanur Forest Disease) ವೈರಾಣು ಸೋಂಕಿತ ಉಣ್ಣೆ ಮರಿಗಳು (ನಿಂಫ್) ಕಚ್ಚುವುದರಿಂದ ಹರಡುವ ವೈರಲ್ ಜ್ವರವಾಗಿದೆ. ಈ ಕಾಯಿಲೆಯು ಸಾಮಾನ್ಯವಾಗಿ ನವೆಂಬರ್‌ನಿಂದ ಮೇ ತಿಂಗಳ ಅವಧಿಯಲ್ಲಿ ಕಂಡುಬರುತ್ತದೆ. ಹಠಾತ್ ಜ್ವರ, ಶರೀರದಲ್ಲಿ ತೀವ್ರವಾದ ಸ್ನಾಯುಗಳ ನೋವು, ತಲೆ ನೋವು, ಇತ್ಯಾದಿ ರೋಗ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಈ ರೋಗ ಲಕ್ಷಣಗಳಿಗೆ ಅನುಗುಣವಾಗಿ ಚಿಕಿತ್ಸೆ ನೀಡಲಾಗುತ್ತಿದೆ.

ರಾಜ್ಯದಲ್ಲಿ 12 KFD ಪೀಡಿತ (ಎಂಡೆಮಿಕ್) ಜಿಲ್ಲೆಗಳು ಇದ್ದರೂ, ವಾಡಿಕೆಯಂತೆ ಪ್ರಸಕ್ತ ವರ್ಷದಲ್ಲಿಯೂ ಮೂರು ಜಿಲ್ಲೆಗಳಿಂದ ಮಾತ್ರ ಪ್ರಕರಣಗಳು ವರದಿಯಾಗುತ್ತಿವೆ. ಈ ವರ್ಷದಲ್ಲಿ ಅಂದರೆ, ದಿ. 01-01-2024 ರಿಂದ 14-02-2024 ರವರೆಗೆ, ರಾಜ್ಯದಲ್ಲಿ 3473 ಕೆ.ಎಫ್.ಡಿ. ಪರೀಕ್ಷೆಗಳನ್ನು ನಡೆಸಲಾಗಿದೆ. ಇದರಲ್ಲಿ ಶಿವಮೊಗ್ಗ (34), ಉತ್ತರ ಕನ್ನಡ (40) ಹಾಗೂ ಚಿಕ್ಕಮಗಳೂರು (7) ಈ ಜಿಲ್ಲೆಗಳಿಂದ ಒಟ್ಟು 81 ಪ್ರಕರಣಗಳು ವರದಿಯಾಗಿವೆ. ಶಿವಮೊಗ್ಗ ಜಿಲ್ಲೆ ಮತ್ತು ಚಿಕ್ಕಮಗಳೂರು ಜಿಲ್ಲೆಯಲ್ಲಿ ತಲಾ 1 ಮರಣ

ವರದಿಯಾಗಿದೆ (ರಾಜ್ಯದಲ್ಲಿ ಒಟ್ಟು 2 ಮರಣಗಳು ವರದಿಯಾಗಿವೆ). ಎರಡೂ ಪ್ರಕರಣಗಳಲ್ಲಿ ಸಹ-ಅಸ್ವಸ್ಥತೆ(co-morbidity) ಇರುತ್ತದೆ. ಮರಣ ಪ್ರಮಾಣ ಪತ್ರವನ್ನು ಚಿಕಿತ್ಸೆ ನೀಡಿದ ಆಸ್ಪತ್ರೆಗಳಲ್ಲಿನ ವೈದ್ಯಾಧಿಕಾರಿಗಳು ನಿಯಮಾನುಸಾರ ಸಾವಿನ ಕಾರಣವನ್ನು ನಮೂದಿಸಿ ನೀಡುತ್ತಾರೆ. ಮುಂದುವರೆದು, ಮರಣದ ನೇರ ಕಾರಣವನ್ನು ವಿಶ್ಲೇಷಿಸಿಲು ಡೆತ್ ಆಡಿಟ್ ಕಮಿಟಿಯನ್ನು ಜಿಲ್ಲಾ ಮಟ್ಟದಲ್ಲಿ ರಚಿಸಲಾಗಿದೆ.

ಮುಂದುವರೆದು, ಈ ಹಿಂದಿನ ಲಸಿಕೆಯ ಕ್ರಮತೆ ಕಡಿಮೆಯಾಗಿದೆ ಎಂದು ಕಸೌಲಿಯಲಿರುವ CDL ಪ್ರಯೋಗಾಲಯ ವರದಿ ನೀಡಿದ ಹಿನ್ನಲೆಯಲ್ಲಿ, Deputy Drug Controller and Licencing Authority, Office of the Drug Controller, Bengaluru ರದ್ದುಗೊಳಿಸಿದೆ. ಪ್ರಸ್ತುತ, ಆರೋಗ್ಯ ಇಲಾಖೆಯು ಭಾರತ ಸರ್ಕಾರದ ಎನ್.ಐ.ವಿ. ಪುಣೆ (ಐ.ಸಿ.ಎಂ.ಆರ್.) ಯೊಂದಿಗೆ ನಿರಂತರ ಸಂಪರ್ಕದಲ್ಲಿದೆ ಹಾಗೂ ಮಂಗನ ಕಾಯಿಲೆ ಲಸಿಕೆ ಕುರಿತಾಗಿ ಐ.ಸಿ.ಎಂ.ಆರ್.ವತಿಯಿಂದ ಸೂಕ್ತ ಕ್ರಮವಹಿಸಿದೆ ಮತ್ತು ಮುಂದಿನ ದಿನಗಳಲ್ಲಿ ಲಸಿಕೆ ಲಭ್ಯತೆಯನ್ನು ಖಚಿತಪಡಿಸಿರುತ್ತದೆ.

**<u>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ, ರೋಗವನ್ನು ನಿಯಂತ್ರಿಸಲು ಈ ಕೆಳಗಿನಂತೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ:</u>**

1. 2024ರಲ್ಲಿ ಮಂಗನ ಕಾಯಿಲೆಯಿಂದ ಉಂಟಾಗುವ ರೋಗಗ್ರಸ್ತತೆ (morbidity) ಮತ್ತು ಮರಣವನ್ನು ತಡೆಗಟ್ಟಲು ನಿರ್ದಿಷ್ಟ ಮಾರ್ಗಸೂಚಿಗಳನ್ನು ದಿನಾಂಕ:30-01-2024ರಂದು ನೀಡಲಾಗಿದೆ ಮತ್ತು ಈ ಮಾರ್ಗಸೂಚಿಗಳನ್ನು KFD ಪೀಡಿತ ಪ್ರದೇಶಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.
2. ಸಾರ್ವಜನಿಕರು ಅನುಸರಿಸಲು ದಿನಾಂಕ 30-01-2024ರಂದು ರಾಜ್ಯ ಮಟ್ಟದಿಂದ ಅಡ್ವೈಸರಿ ನೀಡಲಾಗಿದೆ.
3. ಕೆಳಕಂಡ ವಿಷಯಗಳಲ್ಲಿ ಕಣ್ಗಾವಲು ಬಲಪಡಿಸಲಾಗಿದೆ:
    a. ಮಾನವ ಕಾವಲು
    b. ಮಂಗನ ಸಾವಿನ ವರದಿ
    c. ಉಣ್ಣೆ ಕಣ್ಗಾವಲು
4. VDL ಶಿವಮೊಗ್ಗ ಮತ್ತು MIV ಮಣಿಪಾಲದಲ್ಲಿನ ಪ್ರಯೋಗಾಲಯಗಳನ್ನು KFD ಪರೀಕ್ಷೆಗೆ ಗುರುತಿಸಲಾಗಿದ್ದು, ಶೀಘ್ರವಾಗಿ ಮಾದರಿಗಳನ್ನು ಸಂಸ್ಕರಿಸಿ ಪರೀಕ್ಷೆ ನಡೆಸಿ ವರದಿ ನೀಡಲಾಗುತ್ತಿದೆ.
5. ಕೆ.ಎಫ್.ಡಿ. ಪರೀಕ್ಷೆ, ಪಾಸಿಟಿವ್, ಮರಣ, ಡಿಸ್ಚಾರ್ಜ್ ಕುರಿತಾಗಿ ದೈನಂದಿನ ಬುಲೆಟಿನ್ ಹೊರಡಿಸಲಾಗುತ್ತಿದೆ.
6. KFD ಪಾಸಿಟಿವ್ ಪ್ರಕರಣಗಳಿಗೆ ಎ.ಬಿ.ಪಿ.ಆರ್.ಕೆ. ಅಡಿಯಲ್ಲಿ ವೈದ್ಯಕೀಯ ಚಿಕಿತ್ಸೆಯನ್ನು ಉಚಿತವಾಗಿ ನೀಡಲಾಗುತ್ತಿದೆ ಹಾಗೂ ರೋಗಿಗಳಿಗೆ ಉಚಿತ ಚಿಕಿತ್ಸೆ ನೀಡಲು ಆಸ್ಪತ್ರೆಗಳಿಗೆ ನಿರ್ದೇಶಿಸಲಾಗಿದೆ.
7. KFD ಪಾಸಿಟಿವ್ ಪ್ರಕರಣಗಳು ಪತ್ತೆಯಾದ ತಕ್ಷಣವೇ ಆಸ್ಪತ್ರೆಗೆ ದಾಖಲಿಸುವುದು ಕಡ್ಡಾಯ ಮಾಡಲಾಗಿದೆ. ಇದರಿಂದ ಮೊದಲ ದಿನದಿಂದಲೇ ಪಾಸಿಟಿವ್ ಪ್ರಕರಣಗಳಿಗೆ ಸೂಕ್ತ ಚಿಕಿತ್ಸೆ ಲಭ್ಯವಾಗುವುದು.
8. KFD ಪಾಸಿಟಿವ್ ಪ್ರಕರಣಗಳನ್ನು ಮನೆಯಿಂದ ಆಸ್ಪತ್ರೆಗೆ ಸಾಗಿಸಲು ಮತ್ತು ಅಗತ್ಯವಿದ್ದರೆ, ಉನ್ನತ ರೆಫರಲ್ ಸೆಂಟರ್‌ಗೆ ಸಾಗಿಸಲು ಉಚಿತ ಆಂಬ್ಯುಲೆನ್ಸ್ ಸೌಲಭ್ಯ ಒದಗಿಸಿದೆ.
9. ರೋಗ ಪ್ರಸರಣಾ ಋತುವಿನಲ್ಲಿ ತಾಲ್ಲೂಕು ಆಸ್ಪತ್ರೆಗಳಾದ ಜೆಸಿಎಚ್ ತೀರ್ಥಹಳ್ಳಿ, ಸಾಗರ, ಸಿದ್ದಾಪುರ ಮತ್ತು ಹೊನ್ನಾವರ ಉಪ ವಿಭಾಗೀಯ ಆಸ್ಪತ್ರೆಗಳಲ್ಲಿ KFD ಗೆ ಚಿಕಿತ್ಸೆ ನೀಡಲು ಹಾಸಿಗೆಗಳನ್ನು ಮೀಸಲಿರಿಸಲಾಗಿದೆ.
10. KMC ಮಣಿಪಾಲ, SIMS ಶಿವಮೊಗ್ಗ, KRIMS ಕಾರವಾರ ಆಸ್ಪತ್ರೆಗಳನ್ನು ರೆಫರಲ್ ಆಸ್ಪತ್ರೆಗಳಾಗಿ ಗುರುತಿಸಲಾಗಿದೆ. ಇಲ್ಲಿಯೂ ಸಹ ಎ.ಬಿ.ಪಿ.ಆರ್.ಕೆ. ಅಡಿಯಲ್ಲಿ ವೈದ್ಯಕೀಯ ಚಿಕಿತ್ಸೆಯನ್ನು ಉಚಿತವಾಗಿ ನೀಡಲಾಗುತ್ತಿದೆ.
11. KFD ಪೀಡಿತ ಪ್ರದೇಶದ ಎಲ್ಲಾ PHC ಮತ್ತು ಆಸ್ಪತ್ರೆಗಳಲ್ಲಿ ಸಾಕಷ್ಟು IV ದ್ರಾವಣ, IV ಪ್ಯಾರಸಿಟಮಾಲ್ ದಾಸ್ತಾನು ಇರಿಸಲಾಗಿದೆ.
12. ICU ನಲ್ಲಿ ದಾಖಲಾಗಿರುವ ರೋಗಿಗಳ ಆರೋಗ್ಯ ಸ್ಥಿತಿ-ಗತಿಯನ್ನು ಪ್ರತಿದಿನ ಪರಿಶೀಲಿಸಲು ಟೆಲಿ-ICU ಸೇವೆಯನ್ನು KFD ಗೂ ವಿಸ್ತರಿಸಲಾಗಿದೆ.

13. ಉಣ್ಣೆ ಕಡಿತವನ್ನು ತಡೆಗಟ್ಟಲು ಬಳಸಲಾಗುವ DEPA ತೈಲವನ್ನು ಸಾರ್ವಜನಿಕರಿಗೆ ಬಳಸಲು ಉಚಿತವಾಗಿ ನೀಡಲಾಗಿದೆ.

14. ರಾಜ್ಯಮಟ್ಟದಿಂದ ಈವರೆಗೆ 62794 DEPA ಬಾಟಲ್ ಗಳನ್ನು ವಿತರಿಲಾಗಿದೆ. ತಾತ್ಕಾಲಿಕವಾಗಿ, ಅಗತ್ಯವಿದ್ದಲ್ಲಿ DEPA ತೈಲವನ್ನು ಸ್ಥಳೀಯವಾಗಿ ಖರೀದಿಸಲು ಆದೇಶಿಸಲಾಗಿದೆ. ಉಣ್ಣೆ ಕಡಿತವನ್ನು ತಡೆಗಟ್ಟಲು ಬಳಸಲಾಗುವ DEPA ತೈಲದ ಸಾಕಷ್ಟು ದಾಸ್ತಾನು ಲಭ್ಯವಿದೆ.
15. KFD ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ.
16. ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ಅಂತರ ಇಲಾಖಾ ಸಭೆಗಳನ್ನು ನಿಯಮಿತವಾಗಿ ನಡೆಸಿ ಪರಿಸ್ಥಿತಿಯನ್ನು ಪರಿಶೀಲಿಸಲಾಗುತ್ತಿದೆ.
17. ದಿನಾಂಕ 03-02-2024 ರಂದು ಮಾನ್ಯ ಆಯುಕ್ತರು- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇವರು ಶಿವಮೊಗ್ಗ ಜಿಲ್ಲೆಯಲ್ಲಿ ಕೆ.ಎಫ್.ಡಿ. ಪೀಡಿತ ಎಲ್ಲಾ ಜಿಲ್ಲೆಗಳ ಆರೋಗ್ಯಾಧಿಕಾರಿಗಳ ಸಭೆ ನಡೆಸಿ, ನಿರ್ದೇಶನಗಳನ್ನು ನೀಡಿದ್ದಾರೆ.
18. ರಾಜ್ಯ ಮಟ್ಟದಿಂದ ಅಧಿಕಾರಿಗಳು, RRT ತಂಡ ನಿಯಮಿತವಾಗಿ ಭೇಟಿ ನೀಡುತ್ತಿದ್ದು, ಸಮಯೋಚಿತ ಮಾರ್ಗದರ್ಶನವನ್ನು ನೀಡುತ್ತಿದ್ದಾರೆ.
19. ಪ್ರತಿ ದಿನ ವಿ.ಸಿ. ಮುಖೇನ ಸದರಿ ಕಾರ್ಯ ಚಟುವಟಿಕೆಗಳ ಮೇಲ್ವಿಚಾರಣೆಯನ್ನು ನಡೆಸಲಾಗುತ್ತಿದೆ.

**ಆಕುಕ 34 ಎಸ್ಎಂಎಂ 2024**

**(ದಿನೇಶ್ ಗುಂಡೂರಾವ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ**
**ಸಚಿವರು**